dde-358
T.P-2

51st Year of Publication ★ SATYAVADI Daily, MYSORE 4

Reg No B G 155 21-8-1966

ಸುು ೨೫ ೯ಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ತಿರುಮಲೆ ಶಿರಸ್ತೇದಾರ್ ಎಂ. ವಿ. ಕುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಗರ್ಭಪಾತ ಕಾನೂನು ಪರಿಶೀಲನೆಯಲ್ಲಿ

ಸತ್ಯವಾದಿ ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವನನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ಸೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯೈ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಫೆರಾ ಟಾಕೀಸಿನವರು, ಪದ್ಮಭೂಷಣ ನೋಬ್ರದಾನಿ ಡಾ॥ ಎಂ.ಸಿ ಮೋದಿಯವರು ಡಾ ॥ ಆರ್. ಎಸ್. ಸಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸೂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಲೇಕಾಗಿ ವಿನಂತಿಸಿ, ಈಡೇರುವೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ನವದೆಹಲಿ— ಸೀಮೆಎಣ್ಣೆ ಆಮದು 1965 ರಲ್ಲಿ 11.97 ಲಕ್ಷ ಟನ್ ಇದ್ದುದ್ದು 1968 ರಲ್ಲಿ 4 ಲಕ್ಷ ಟನ್‌ಗೆ ಇಳಿಯಿತು.

●

ಶ್ರೀನಗರ— ಭಾನುವಾರ ನಡೆದ ಉಪ ಚುನಾವಣೆಯಲ್ಲಿ ಕೇವಲ ಶೇಕಡ 5 ಮಂದಿ ವೋಟು ಮಾಡಿದರು. — ಪುತ್ತನೀಡುವ ಒಂದು ಸ್ಥಳದಲ್ಲಿ ಯಾರೊಬ್ಬರೂ ವೋಟು ಮಾಡಲಿಲ್ಲ !

ಎರಡೇ ಕುಟುಂಬಗಳ ಊರು

ರೆಸರಲ್ಯಾಡ್— ಜರ್ಮನಿಯ ಆಧ್ಯಂತ ಚಿಕ್ಕ ಊರಾದ ರೆಸರಲ್ಯಾಂಡ್ ಹದಿನಾರು ಜನರನ್ನೂ, ಎಪ್ಪತ್ತು ಹಸುಗಳನ್ನೂ. 20 ಕುರಿಗಳನ್ನೂ ಮತ್ತು 10 ಹಂದಿಗಳನ್ನೂ ಹೊಂದಿದೆ. ಇದರಲ್ಲಿ ಎರಡು ಅಂದವಾದ ಮನೆಗಳೂ ಮತ್ತು ದೊಡ್ಡದೊಡ್ಡ ತೋಟಗಳೂ ಇದ್ದು, ಪೈಕ್‌ನದಿಯ ದಡದ ಮೇಲಿವೆ. ಇಲ್ಲಿ ವಾರ್ನ್‌ಸ್ಟರ್ಟ್ ಮನೆತನ ಮತ್ತು ಒಟ್ಟರ್ ಮನೆತನ ಎಂದು ಎರಡು ಮನೆತನಗಳಿವೆ. ಈಗ 38 ವರ್ಷಗಳಿಂದಲೂ ವಾರ್ನ್‌ಸ್ಟರ್ಟ್ ವಂಶದಿಂದ ಬರ್ಗೋ ಮಾಸ್ಟರು ಆರಿಸಿ ಬರುತ್ತಿದ್ದು ಪ್ರತಿ ಸಾರಿಯೂ ಓಟರ್ಸ್ ವಂಶವು ಪ್ರತಿಸ್ಪರ್ಧಿಯನ್ನು ನಿಲ್ಲಿಸುತ್ತಿದೆ. ವಾರ್ನ್‌ಸ್ಟರ್ಟ್ ಕುಟುಂಬದಲ್ಲಿ ಮಕ್ಕಳು ಹೆಚ್ಚಾಗಿರುವುದರಿಂದ ಅದೇ ಬಹುಮತ ಪಡೆಯುತ್ತಿದೆ. ಇಲ್ಲಿ ಚುನಾವಣೆಯು ಯಾವ ಹೆಚ್ಚಿನ ಖರ್ಚೂ ಗಲಾಟೆಯೂ ಇಲ್ಲದೆ ನಡೆಯುತ್ತಿತ್ತು.

ಹೊಟ್ಟೆಗಿಲ್ಲ

ಚನ್ನೈಪಟ್ಟಣ— ಈ ತಾಲ್ಲೂಕಿನ ಗ್ರಾಮಸ್ಥರು ಆಹಾರ ಮತ್ತು ಕೆಲಸ ಹುಡುಕಿಕೊಂಡು ಹೇರೆ ಕಡೆಗಳಿಗೆ ಹೋಗುತ್ತಿದ್ದಾರೆಂದೂ, ಗೆಡೆಗೆಣಸು ತಿನ್ನುತ್ತಿರುವರೆಂದೂ ವರದಿಯಾಗಿದೆ.

★

ಸಕ್ಕರೆ ಬಿಡುಗಡೆ

ನವದೆಹಲಿ— ರಾಜ್ಯ ಸರಕಾರಗಳಿಗೆ ಲೆವಿ ಸಕ್ಕರೆಯಿಂದ 1 ಲಕ್ಷ ಟನ್ ಬಿಡುಗಡೆ ಮಾಡಲು ಕೇಂದ್ರ ಸರಕಾರ ಫ್ಯಾಕ್ಟರಿಗಳಿಗೆ ಆಜ್ಞೆ ಮಾಡಿದೆ.

★

ಕಲ್ಲೀಕೋಟೆ— ಕಲೆಕ್ಟರು ಮತ್ತು ಆದಾಯ ತೆರಿಗೆ ಕಚೇರಿ ಪಿಕೆಟ್ ಮಾಡಿದ 50 ಎಸ್ಸೆಸ್ಸೆ ಸ್ವಯಂಸೇವಕರನ್ನು ಪೋಲೀಸರು ಹೊರಗೆ ತಂದುಬಿಟ್ಟರು.

ರಾತ್ರಿ ಕ್ಲಬ್‌ಗಳು

ಮದರಾಸು— ವಿದೇಶೀ ಸ್ವವಾಸಿಕರನ್ನು ಆಕರ್ಷಿಸಲು ರಾತ್ರಿ ಕ್ಲಬ್ಬುಗಳನ್ನು ಸ್ಥಾಪಿಸುವದನ್ನು ಮದರಾಸು ಸರ್ಕಾರ ಇಚ್ಛಿಸುವದಿಲ್ಲವೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು – ಹೋಡಲು ಮತ್ತು ಕ್ಲಬ್‌ಗಳಲ್ಲಿ ಆಶ್ಲೀಲ ನೃತ್ಯ ನಡೆಸಿದರು ಪೋಲೀಸರು ಸೂಕ್ತ ಕ್ರಮ ತೆಗೆದುಕೊಳ್ಳುವರೆಂದು ತಿಳಿಸಲಾಯಿತು – ತಿರುಚರಪಳ್ಳಿಯಲ್ಲಿ ಜುಲೈ 23 ರಂದು ಅಶ್ಲೀಲ ನೃತ್ಯ ನಡೆಸಿದ ಇಬ್ಬರು ಮಹಿಳೆಯರಿಗೆ ಕೋರ್ಟಿನಲ್ಲಿ ರೂ. 25 ಜುಲ್ಮಾನೆ ವಿಧಿಸಲಾಯಿತೆಂದು ತಿಳಿಸಲಾಯಿತು.

ಪಾಕಿಸ್ತಾನದ ಬಗ್ಗೆ ಎಚ್ಚರಿಕೆ

ನವದೆಹಲಿ— ಪಾಕಿಸ್ತಾನವು ಈಚಿದ್ದ ನಿರೋಧ ಒಪ್ಪಂದವನ್ನು ತಿರಸ್ಕರಿಸಿದ್ದರಿಂದ ಅದಕ್ಕೆ ಯುದ್ಧ ಬಿಡುವ ಇಚ್ಛೆಯಿಲ್ಲದಿರುವದಕ್ಕೆ ವ್ಯಕ್ತಪಬಿಸಿರುವದರಿಂದ ಭಾರತವು ಎಚ್ಚರಿಕೆಯಿಂದಿರುವುದು ಅವಶ್ಯಕವೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

★

ಮಂತ್ರಿಮಂಡಲದ ರಾಜೀನಾಮೆಗೆ

ಬೆಂಗಳೂರು— ಮಹಾಜನ ಕಮಿಷನ್ ವರದಿಯನ್ನು ಜಾರಿಗೆ ತರುವಂತೆ ಕೇಂದ್ರವನ್ನು ಒತ್ತಾಯಪಡಿಸಲು ರಾಜ್ಯದ ಮಂತ್ರಿ ಮಂಡಲ ರಾಜೀನಾಮೆ ಕೊಡಬೇಕೆಂದು ಜನಸಂಘದ ಕರ್ನಾಟಕ ಪ್ರದೇಶ ಕಾರ್ಯಕಾರಿ ಸಮಿತಿ ನಿರ್ಣಯಿಸಿದೆ.

★

ನಾಗಪುರ— ಅಮರಾವತಿ ಪಟ್ಟಣದ ಜವಹರ ಗೇಟು ಭಾಗದಲ್ಲಿ 3 ಸಾವಿರ ಜನರ ಗುಂಪನ್ನು ಚದುರಿಸಲು ನಿನ್ನೆ ಪೋಲೀಸರು ಗೋಳೀಬಾರು ಮಾಡಿದರು – ಇಬ್ಬರು ಆಹುತಿಯಾದರು.

ಗರ್ಭಪಾತ

ಲಕ್ನೊ— ಕೇಂದ್ರ ನ್ಯಾಯಾಂಗ ಸಚಿವಾಲಯವು ಗರ್ಭಪಾತ ನಿಬಂಧನೆಯನ್ನು ಥಾರಾಳಗೊಳಿಸಲು ತಯಾರಿಸಿರುವ ಸೂದೆಯು ಮಂತ್ರಿಮಂಡಲದ ಅನುಮತಿಯಲ್ಲಿದೆ ಎಂದು ತಿಳಿಸಲಾಗಿದೆ.

★

ಸರಿಯಾದ ಕೆಲಸ

ನವದೆಹಲಿ— ಸರಕಾರವು ಗಾಂಧಿ ಶತಮಾನೋತ್ಸವವುದಂದು ಗಾಂಧೀ ಸ್ಮಾರಕಕ್ಕೆ ಸಾರಾಯಿ ಕುಡಿಸುವದೇ ಎಂದು ಲೋಕ ಸಭೆಯಲ್ಲಿ ಒಬ್ಬ ಸದಸ್ಯರು ಪ್ರಶ್ನೆಯೆಳಲು ಸ್ಪೀಕರರ ಈ ರೀತಿ ಮಹಾತ್ಮಾ ಗಾಂಧಿಯವರಿಗೆ ಅಪಮಾನ ಹಡಿಸಬಾರದೆಂದು ಎಚ್ಚರಿಸಿದರು.

●

ವಿಶ್ವಸಂಸ್ಥೆ ಬಡ್ಜೆಟ್

ವಿಶ್ವಸಂಸ್ಥೆ — 1969 ಕ್ಕೆ ವಿಶ್ವಸಂಸ್ಥೆ ಬಡ್ಜೆಟ್ 140.50 ಮಿಲಿಯ ಡಾಲರುಗಳಾಗಿ ಪ್ರಧಾನ ಕಾರ್ಯದರ್ಶಿ ಯು ॥ ಥಾಂಟರು ಯೋಜಿಸಿರುವರು.

★

ಗಾಲ್ಫ್ ಪಂಥ

ಹಾರಿಸ್— ಬಹು ಭಾರಿ ಪಾರಿತೋಷಕದ ವೆಸ್ಟ್‌ಚೆಸ್ಟರ್ ಗೋಲ್ಫ್ ಪಂಥದಲ್ಲಿ ಜೂಲಿಯಸ್ ಬೊರೋಸ್ ವಿಜಯಗೊಂಡು 250000 ಡಾಲರು (ರೂ. 1875 ಸಾವಿರ) ಪಡೆದನು.

★

ಮೈಸೂರಿನವರ ಆಶಯ

ನವದೆಹಲಿ— ನಿನ್ನೆ ಸಮ್ಮಿಳಿತರಾದ ಪಾರ್ಲಿಮೆಂಟಿನ ಮೈಸೂರು ಸದಸ್ಯರು ಖಾಡಿ ವ್ಯಾಜ್ಯದಲ್ಲಿ ಮಹಾಜನ ಕಮಿಷನ್ ವರದಿಯನ್ನು ಬೇಗನೆ ಜಾರಿಗೆ ತರುವಂತೆ ಮಾಡಲು ನಿರ್ಧರಿಸಿದರು.

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಭಾರತದೇಶಾದ್ಯಂತ ಸಹಸ್ರಾರು ಮಠಾಧೀಶರೂ, ಆಚಾರ್ಯಪುರುಷರೂ ಇದ್ದಾರೆ. ಹಿಂದೂ ಸಮಾಜವನ್ನು ಧಾರ್ಮಿಕ ಮಾರ್ಗದಲ್ಲಿ ಕೊಂಡೊಯ್ಯುವುದೇ ಇವರ ಮುಖ್ಯ ಧ್ಯೇಯ. ಪ್ರಾಚೀನ ಕಾಲದಿಂದಲೂ ಧಾರ್ಮಿಕ ಪೀಠಾಧಿಪತಿಗಳಾದ ಇವರು ಸಮಾಜವನ್ನು ಇಸರು ಧರ್ಮಬ ಹಿರವಾಗದಂತೆ ರಕ್ಷಿಸಿಕೊಂಡು ಬಂದಿರುವ ಶ್ರೇಯಸ್ಸು ಇವರಿಗೆ ಸಲ್ಲಬೇಕು. ಈ ಕಾಲವಲ್ಲಿಯೂ ಅನೇಕ ಮಠಾಧೀಶರು ಧರ್ಮ ರಕ್ಷಣೆಗಾಗಿ ಅಹರ್ನಿಶಿ ದುರಿಯುತ್ತಿದ್ದಾರೆ. ಆದರೆ ಇಂಥವರ ಸಂಖ್ಯೆ ದಿನೇದಿನೇ ಕಮ್ಮಿಯಾಗುತ್ತಿದೆಯೆಂದು ವಿಷಾದಿಸಬೇಕಾಗಿದೆ.

ರಾಜಕೀಯ ನಾಯಕರು ಹಿಂದೂಧರ್ಮಕ್ಕೆ ವಿರೋಧವಾದ ಶಾಸನಗಳನ್ನು ಮಾಡಿದ್ದು, ಮಠಾಧಿಪತಿಗಳನ್ನು ಚುನಾಯಿಸುವಾಗ ಅನೇಕ ಕಡೆ ಅದಕ್ಕೆ ಅರ್ಹರಾದ ವ್ಯಕ್ತಿಗಳಿಗೆ ಬದಲಾಗಿ, ಅನ್ಯವ್ಯಕ್ತಿಗಳನ್ನು ಚುನಾಯಿಸಿದ್ದು, ತಮ್ಮ ಶಿಷ್ಯರಾದ ಸಮಾಜದ ಭಾಗಕ್ಕೂ, ಮಠಾಧೀಶರಿಗೂ ಸಂಪರ್ಕ ಕಡಮೆಯಾಗುತ್ತಿರುವುದು, ಸಮಾಜದ ಉನ್ನತಿಗಿಂತ, ಸುಖದ ಐಶ್ವರ್ಯ ಸುತ್ತು ಬಿರುದು, ಬಿಂಕಾವಲಿಗಳಿಗೆ ಮಠಾಧೀಶರು ಹೆಚ್ಚಿನ ಗಮನ ಕೊಟ್ಟದ್ದು, ಚರ್ಚಾಸ್ಪದವಲ್ಲದ ಧರ್ಮಶಾಸ್ತ್ರಗಳಿಗಿಂತ ಚರ್ಚಾಸ್ಪದವಾದ ವೇದಾಂತ ಪ್ರಚಾರಕ್ಕೆ ಹೆಚ್ಚಿನ ಗಮನ ಕೊಟ್ಟದ್ದು, ಈ ಕಾರಣಗಳಿಂದ ಬಹುತೇಕ ಮಠಾಧೀಶರಿಂದ ದರ್ಶನದ ಉನ್ನತಿಯಕಾರ್ಯ ಅಷ್ಟಾಗಿ ನಡೆಯಲು ಸಾಧ್ಯವಾಗಲಿಲ್ಲ. ಅದರಿಂದ ಸಮಾಜಕ್ಕೆ ಬಹಳ ಹಾನಿಯುಂಟಾಗುತ್ತಿದೆ.

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India s rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Quality Printing — Neat Binding

Lakshminarasimha Press

Sivarampet, Mysore

ಆರೋಗ್ಯಕ ಏಜೆನ್ಸೀಸ್

ಲಂನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆನ್ನಲ್ಲಿ ದೊರೆಯುತ್ತವೆ

ವುಡ್‌ಲಾಂಡ್ ಅವೋಘ 2ನೇ ವಾರ

— ಮನಮೋಹಕ ಹಿಂದಿ ಚಿತ್ರ —

ಘಬ್ಬರ್

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಭಬಿತಾ, ಕಾಂಚನಾ, ಮುಕ್ರಿ, ಆಗಾ ಮುಂತಾವರು

ಸಂಗೀತ —

ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೆರ— ಜನವರಿ 7 ನೇ ವಾರ

ಚಿತ್ರಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣಾರ್ಥ ಬೆಂಬಲ ನೀಡಿ

ಶ್ರೀದಕ್ಷಿಣಕಾ ಜಗದ್ಗುರು ಮಹಾಸನ್ನಿಧಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಿಗಳವರು ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ಪಶುಸಂಪತ್ತಿನ ರಕ್ಷಣೆ, ತಳಿಉಳಿವು, ಪಶುವೈದ್ಯ, ಪಶುಸಂಗೋಪನೆ ಏಕೈಕ ಪ್ರಚಾರ ಮಾಸಪತ್ರಿಕೆ : ವಾರ್ಷಿಕ ಚಂದಾ 50 ನ್ಯೆಪೈ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣೆಯ ಲೇಖನಗಳನ್ನೂ ಪ್ರೋತ್ಸಾಹಕ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇವರಿಂದ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು

ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರನಿರತ ಹೊಂಗನೂರು

ಗೋರಕ್ಷಣ ಆಫೀಸು ಸತ್ಯವಾದಿಪೇಪರ್ ಚಾಮರಾಜಪುರಂ ಮೈಸೂರು 4

ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮುಖ್ಯ ವ್ಯಾಪಾರವಾಗಿ ಕಾರ್ಯಗಳು ಹೆಚ್ಚಾಗಿ ನಡೆಯಲಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore-4